## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 892
2. ಸದಸ್ಯರ ಹೆಸರು : ಶ್ರೀ ಎನ್.ಎಸ್. ಬೋಸ್‌ರಾಜು
3. ಉತ್ತರಿಸುವ ದಿನಾಂಕ : 24/08/2026
4. ಉತ್ತರಿಸುವ ಸಚಿವರು : ಮಾನ್ಯ ಲೋಕೋಪಯೋಗಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಯಚೂರು ನಗರದಲ್ಲಿ ನೂತನ ಜಿಲ್ಲಾ ನ್ಯಾಯಾಲಯ ಸಂಕೀರ್ಣ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿ ಇದೆ; ಸದರಿ ಕಾಮಗಾರಿಯನ್ನು ಕಾಲಮಿತಿ ಅವಧಿಯಲ್ಲಿ ಪೂರೈಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ರಾಯಚೂರು ನಗರದ ಜಿಲ್ಲಾ ನ್ಯಾಯಾಲಯ ಸಂಕೀರ್ಣ ಕಟ್ಟಡದ ಕಾಮಗಾರಿಯು ರೂ.25.70 ಕೋಟಿಗಳ ಅಂದಾಜು ಮೊತ್ತಕ್ಕೆ ಅನುಮೋದನೆಗೊಂಡಿದ್ದು, ಅಂದಾಜು ಪಟ್ಟಿಯಲ್ಲಿ ಅನುಮೋದನೆಗೊಂಡಂತೆ, ಭೌತಿಕವಾಗಿ ಕಟ್ಟಡ ನಿರ್ಮಾಣ ಕಾಮಗಾರಿಯು ದಿನಾಂಕ:27.07.2026ರಂದು ಪೂರ್ಣಗೊಂಡಿರುತ್ತದೆ.<br><br>ಆದರೆ, ಜಿಲ್ಲಾ ನ್ಯಾಯಾಲಯ ಸಂಕೀರ್ಣ ಕಟ್ಟಡವನ್ನು ಪೂರ್ಣ ಪ್ರಮಾಣದಲ್ಲಿ ನಿರ್ವಹಿಸಲು ಹಾಗೂ ನ್ಯಾಯಾಲಯದ ಚಟುವಟಿಕೆಗಳು ಪ್ರಾರಂಭಿಸಲು ಹೆಚ್ಚುವರಿ ಮೂಲಭೂತ ಸೌಕರ್ಯಗಳು ಕಲ್ಪಿಸುವುದು ಅವಶ್ಯಕವಿದ್ದು, ಅದರಂತೆ ದಿನಾಂಕ:16-06-2024ರಲ್ಲಿ Registrar General, High Court of Karnataka ರವರು ಪರಿವೀಕ್ಷಣೆಯ ಸಮಯದಲ್ಲಿ ಅಂದಾಜು ಪಟ್ಟಿಯನ್ನು ಸಲ್ಲಿಸಲು ಸೂಚಿಸಿರುತ್ತಾರೆ.<br><br>ಅದರಂತೆ, ನ್ಯಾಯಾಲಯ ಕಟ್ಟಡ ಪ್ರಾರಂಭಕ್ಕೆ ಅವಶ್ಯಕವಿರುವ ಅಂಶಗಳನ್ವಯ ರೂ.13.00 ಕೋಟಿಗಳ ಅನುದಾನ ಕೋರಿ ಪ್ರಸ್ತಾವನೆಯು ಸರ್ಕಾರದಲ್ಲಿ ಸ್ವೀಕೃತಗೊಂಡಿದ್ದು, ಇದರಲ್ಲಿ ರೂ.5.00 ಕೋಟಿಗಳ ಅನುದಾನವು ದಿನಾಂಕ:17.07.2026ರಂದು ಬಿಡುಗಡೆಯಾಗಿರುತ್ತದೆ. ಅನುದಾನಕ್ಕೆ ತಕ್ಕಂತೆ ಅಂದಾಜು ಪಟ್ಟಿಯನ್ನು ತಯಾರಿಸಲು ಮಾನ್ಯ ಜಿಲ್ಲಾ ಸತ್ರ ನ್ಯಾಯಾಧೀಶರನ್ನು ಸಂಪರ್ಕಿಸಿ ಕ್ರಮವಹಿಸಲಾಗುವುದು. ತದನಂತರ ಟೆಂಡರ್ ಆಹ್ವಾನಿಸಿ ಗುತ್ತಿಗೆ ವಹಿಸಿದ 11 ತಿಂಗಳ ಕಾಲಾವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತದೆ. |
| ಆ) | ರಾಯಚೂರು ನಗರದಲ್ಲಿ "ಬಾರ್ ಆಸೋಸಿಯೇಷನ್" ಕಟ್ಟಡ ಕಾಮಗಾರಿ ಯಾವ ಹಂತದಲ್ಲಿ ಇದೆ; ಕಾಲಮಿತಿ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ರಾಯಚೂರು ನಗರದ ಬಾರ್ ಆಸೋಸಿಯೇಷನ್ ಕಟ್ಟಡ ಕಾಮಗಾರಿಯು ಮೂಲ ಅಂದಾಜು ಮೊತ್ತ ರೂ. 3.00 ಕೋಟಿಗಳಿಗೆ ಅನುಮೋದನೆಗೊಂಡಿದ್ದು, ಅನುಮೋದನೆಗೊಂಡಿರುವಂತೆ ನೆಲ ಮಹಡಿ ಹಾಗೂ ಮೊದಲನೆ ಮಹಡಿ ಕಾಮಗಾರಿಯನ್ನು ದಿನಾಂಕ:18.07.2026ರಂದು ಪೂರ್ಣಗೊಳಿಸಲಾಗಿರುತ್ತದೆ. |

**ಸಂಖ್ಯೆ: ಲೋಇ 60 ಬಿಎಲ್ ಕ್ಯೂ 2026**

**(ಸತೀಶ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು.